Kristu Jayanti College
AUTONOMOUS Bengaluru
Accredited 'A' Grade by NAAC | Affiliated to Bangalore University

**DEPARTMENT OF KANNADA**
**REPORT ON THEATRE WORKSHOP**

**Intra**

**Title: ರಂಗ ತರಬೇತಿ ಕಾರ್ಯಾಗಾರ**

Date: 23 **and** 24 **August** 2019

Classes Attended & Number of students benefited: 70

Or

Number of beneficiaries: In-house: 70 External: 0

**List of Resource Persons with details: Dr.Pavithra, Assistant professor.**
**ಡಾ. ಪವಿತ್ರ**

[Inauguration, Sessions and Valedictory]

**Objective:**

**I: Title, resource person:** : ರಂಗ ತರಬೇತಿ ಕಾರ್ಯಾಗಾರ-ಡಾ. ಪವಿತ್ರ

ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಪ್ರತಿವರ್ಷವು ಜರುಗುವಂತೆ ಈ ವರ್ಷವು ಕೂಡ ದಿನಾಂಕ ೨೩ ಮತ್ತು ೨೪ರಂದು ರಂಗತರಬೇತಿ ಕಾರ್ಯಾಗಾರವು ನಡೆಯಿತು. ಡಾ. ಪವಿತ್ರ ಅವರು ಯಶಸ್ವಿಯಾಗಿ ನಡೆಸಿಕೊಟ್ಟರು. ರಂಗಗೀತೆ, ಅಭಿನಯ, ಧ್ವನಿ ಪರೀಕ್ಷೆ, ಮುಖವಾಡ ತಯಾರಿಕೆ ಇವುಗಳ ಕುರಿತು ತರಬೇತಿ ನೀಡಿದರು. ಕಾಲೇಜಿನ ರಂಗಶಿಕ್ಷಣದ 'ರಂಗಾಂತರಂಗ' ತಂಡದ ಮೂಲಕ 'ನಾಯಿಕಥೆ' ಎಂಬ ನಾಟಕ ಪ್ರದರ್ಶನವನ್ನು ನೀಡಲಾಯಿತು. ಈ ವರ್ಷ ರಂಗ ತರಬೇತಿಗೆ ಆಗಮಿಸಿದ ಮಕ್ಕಳಿಗೆ ಉತ್ತಮವಾದ ಮಾರ್ಗದರ್ಶನವಾಯಿತು.

**II: Title, resource person**: ರಂಗ ತರಬೇತಿ ಕಾರ್ಯಾಗಾರ-ಡಾ. ಪವಿತ್ರ

ಕಾರ್ಯಾಗಾರದ ಎರಡನೇ ದಿನ ಈಗಾಗಲೇ ತಯಾರಿಸಿದ ಮುಖವಾಡಗಳಿಗೆ ವಿವಿಧ ಬಣ್ಣಗಳ ಮೂಲಕ ಕಲಾಕೌಶಲವನ್ನು ಹೇಳಿಕೊಡಲಾಯಿತು. ಅಭಿನಯದ ವಿವಿಧ ಹಂತಗಳು, ರಸಭಾವಗಳ ಅಭಿವ್ಯಕ್ತಿ, ಧ್ವನಿಯ ಏರಿಳಿತ, ನಟನೆಯಲ್ಲಿ ವಹಿಸಬೇಕಾದ ಎಚ್ಚರಗಳು ಈ ಎಲ್ಲ ವಿಚಾರ ಕುರಿತು ತರಬೇತಿ ನೀಡಲಾಯಿತು. ಫೆಬ್ರವರಿ ೪ರಂದು ನಡೆಯಲಿರುವ ನಾಟಕದ ತರಬೇತಿಗಾಗಿ ಆಯ್ಕೆ ಪ್ರಕ್ರಿಯೆ ಕೂಡ ನಡೆಸಲಾಯಿತು. ಈಗಾಗಲೇ ತರಬೇತಿಗೊಂಡಿರುವ ವಿದ್ಯಾರ್ಥಿಗಳು ಹಾಗು ಪ್ರಸ್ತುತ ವರ್ಷದ ವಿದ್ಯಾಥಿಗಳನ್ನು ವಿವಿಧ ಅಭಿನಯ ಪರೀಕ್ಷೆಗಳೊಂದಿಗೆ ಪರಿಶೀಲಿಸಲಾಯಿತು. ಮಧ್ಯಾಹ್ನ ೪ಗಂಟೆಗೆ ಸಮಾರೋಪ ಸಮಾರಂಭವನ್ನು ಆಯೋಜಿಸಿಲಾಯಿತು. ತರಬೇತಿಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಿ ಗೌರವಿಸಿಲಾಯಿತು.

**Outcome**:ವಿದ್ಯಾರ್ಥಿಗಳಿಗೆ ಸಂವಹನ ಕೌಶಲ, ಸಮಾಜದೊಂದಿಗೆ ನಮ್ಮ ಸರಿಯಾದ ವರ್ತನೆ, ಅಭಿನಯದ ಕಲಿಕೆ, ಸುಲಭವಾದ ಕಲೆಗಳ ಅಭಿವ್ಯಕ್ತಿ, ತಮ್ಮಲ್ಲಿರುವ ದೋಷಗಳ ತಿದ್ದಿಕೊಳ್ಳುವುದು, ಸರಿಯಾದ ಕೇಳುವಿಕೆ ಹಾಗೂ ಓದುವಿಕೆಯ ಗ್ರಹಿಕೆ ಈ ಮೊದಲಾದ ಅಂಶಗಳನ್ನು ವಿದ್ಯಾರ್ಥಿಗಳು ಪಡೆದುಕೊಂಡರು.

**Feedback:** ರಂಗ ಶಿಕ್ಷಣದ ಮೂಲಕ ತಮ್ಮಲ್ಲಿ ಅಡಗಿರುವ ಕೌಶಲ್ಯವನ್ನು ಪರೀಶೀಲಿಸಿಕೊಳ್ಳಲು ಈ ಕಾರ್ಯಗಾರವು ಪ್ರವೇಶ ಒದಗಿಸಿತು. ಸಮಾಜದಲ್ಲಿ ಪರಸ್ಪರ ಸಂವಹನದಲ್ಲಿ ತೊಡಗಿರುವಾಗ ತಾವು ಅನುಸರಿಸಬೇಕಾದ ಆಂಗಿಕ, ಶಾಬ್ದಿಕ ವ್ಯತ್ಯಾಸಗಳನ್ನು ಕಲಿಯಲಾಯಿತು. ಮುಖವಾಡ ತಯಾರಿಕೆ, ಬಣ್ಣಗಳನ್ನು ವಿವಿಧ ಹೊಸ ಕೌಶಲ್ಯಗಳ ಮೂಲಕ ಬಳಸುವ ಕ್ರಮ ಹೊಸ ಕಲಿಕೆಯಾಗಿ ಮೂಡಿತು. ವಿದ್ಯಾರ್ಥಿಗಳಿಗೆ ಅಭಿನಯ, ಧ್ವನಿ ವ್ಯತ್ಯಾಸದಲ್ಲಿ ಇರುವ ದೋಷಗಳನ್ನು ತಿದ್ದಿಕೊಳ್ಳಲು

ಸಹಾಯಕವಾಯಿತು. ತರಗತಿ ಅಭ್ಯಾಸಗಳ ಜೊತೆಗೆ ರಂಗಶಿಕ್ಷಣವು ಸಮಾಜದೊಂದಿಗೆ ಸರಿಯಾದ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕವಾಗುವ ಜೊತೆಗೆ ಪೂರ್ಣತೆಯನ್ನು ಸಾಧಿಸಲು ಅನುಕೂಲವಾಗುತ್ತದೆ.

**Photo 1**



ರಂಗ ತರಬೇತಿ ಕಾರ್ಯಾಗಾರದಲ್ಲಿ ಮುಖವಾಡ ತಯಾರಿಕೆಯ ಶಿಕ್ಷಣವನ್ನು ಡಾ. ಪವಿತ್ರ ಅವರು ವಿದ್ಯಾರ್ಥಿಗಳಿಗೆ ತರಬೇತಿಗೊಳಿಸುತ್ತಿರುವುದು.

**Photo 2**





ರಂಗ ತರಬೇತಿ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಅಭಿನಯದಲ್ಲಿ ತೊಡಗಿರುವುದು.

Report prepared by                                                   Head of the Department

Prof. Ravishankar A.k                                                  Dr. Sarvesh B.S